

## ಹಸು-ಹಸು!

ಸುಡು ಬಿಸಿಲಿನ ಮಧ್ಯಾಹ್ನ ಎಣ್ಣೆ ಕಾಣದ ಕಬ್ಬಿಣದ ಗೇಟು 'ಖಟಕ್–ಖ್ಖರ್ss' ಎನ್ನುವ ಕರ್ಕಶ ಶಬ್ದ ಮಾಡುತ್ತ ತೆರೆದುಕೊಂಡಿರುವುದನ್ನು ಅಡುಗೆಮನೆಯಿಂದಲೇ ಕೇಳಿಸಿಕೊಂಡ ಶೀಲಾ, ವರಾಂಡದಲ್ಲಿ ಆಡುತ್ತಿದ್ದ ತನ್ನ ನಾಲ್ಕು ವರ್ಷದ ಪುಟ್ಟ ಮಗನಿಗೆ, 'ಯಾರೋ ಪುಟ್ಟಾ... ಅದು' ಎಂದು ಕೇಳಿದಳು. ಮುಂಬಾಗಿಲಲ್ಲಿ ಆಡುತ್ತಿದ್ದ ಪುಟ್ಟ ತಲೆ ಎತ್ತಿ ಒಮ್ಮೆ ಗೇಟಿನತ್ತ ನೋಡಿ, 'ಹಸು, ಹಸು' ಎಂದ. ಅದನ್ನು ಕೇಳಿಸಿಕೊಂಡ ಶೀಲಾ, 'ತಾಳು ಬಂದೆ, ಬಂದೆ...' ಎನ್ನುತ್ತ ಅಲ್ಲೇ ಇದ್ದ ಪ್ಲಾಸ್ಟಿಕ್ ಬಕೇಟಿಗೆ ತರಕಾರಿ, ಹಣ್ಣಿನ ಸಿಪ್ಪೆ, ಮುಸುರೆ ಮುಂತಾದವುಗಳನ್ನು ತುಂಬಿ ಹೊರಲಾರದೇ ಕಷ್ಟಪಟ್ಟು ಎತ್ತಿಕೊಂಡು ಹೊರಗೆ ಬಂದು ನೋಡುತ್ತಾಳೆ, ಅಲ್ಲಿ ಬಂದಿರುವುದು ತನ್ನ ಆಪ್ತ ಗೆಳತಿ 'ವಸುಂಧರ.'

ಈ ಮೊದಲು ಗೆಳತಿಯನ್ನು ತಾನು 'ವಸು, ವಸು' ಎಂದು ಕರೆದದ್ದನ್ನು ಮಗರಾಯ ಕೇಳಿಸಿಕೊಂಡಿದ್ದ. ಮಗ 'ಹಸು, ಹಸು' ಎಂದು ಉಲಿದಿರುವುದು ಗೊತ್ತಿದ್ದರೂ ಅದನ್ನು ತೋರದೇ ಕೈಯಲ್ಲಿದ್ದ ಬಕೇಟನ್ನು ಪಕ್ಕಕ್ಕಿರಿಸಿ, 'ಬಾರೆ... ಬಾ...' ಎಂದು ಗೆಳತಿಯನ್ನು ಬರಮಾಡಿಕೊಂಡಳು ನಮ್ಮ ಶೀಲಾ!

**ಅರವಿಂದ ಜಿ. ಜೋಷಿ, ಮೈಸೂರು**

## ಯಾವುದು ಬೇಕು?

ನಮ್ಮ ಅಣ್ಣ ಎಂಜಿನಿಯರಿಂಗ್ ಕಾಲೇಜು ಸೇರಿದ ಹೊಸತು. ಎಂಜಿನಿಯರ್ ಆಗೇಬಿಟ್ಟೆ ಎನ್ನುವಂತಹ ಉತ್ಸಾಹ, ಹೆಮ್ಮೆ, ಸಡಗರ ಅವನಿಗೆ. ಕಾಲೇಜಿಗೆ ಉತ್ಸಾಹದಿಂದ ಹೋಗಿ ಬರುತ್ತಿದ್ದ ಅವನಿಗೆ ಒಂದು ಫಜೀತಿ ಎದುರಾಗಿತ್ತು. ಅವನ ಪಕ್ಕದ ಬೆಂಚಿನಲ್ಲಿ, ಒಬ್ಬ ಸುಂದರ, ನಗುಮೊಗದ ಹುಡುಗಿ ಕುಳಿತುಕೊಳ್ಳುತ್ತಿದ್ದಳಂತೆ. ಅವನಿಗೆ ಹದಿವಯಸ್ಸಿನ ಸಹಜ ಸೆಳೆತ, ಆಕರ್ಷಣೆ ಆ ಹುಡುಗಿಯ ಕಡೆಗೆ. ಮತ್ತೆ ಮತ್ತೆ ಆ ಹುಡುಗಿಯತ್ತಲೇ ಅವನ ಗಮನ!

ಎಷ್ಟು ಬೇಡ ಎಂದರೂ, ಮನಸ್ಸು ಕೇಳಬೇಕಲ್ಲ! ಒಂದು ದಿನ ಇದು ಅತಿ ಆಯ್ತೇನೋ... ಪಾಠ ಮಾಡುತ್ತಿದ್ದ ಅಧ್ಯಾಪಕರು, 'ಎಲೈ ಹುಡುಗಾ, ಪಾಠ ಅಥವಾ ಹುಡುಗಿ, ಒಂದನ್ನು ಆಯ್ಕೆ ಮಾಡಿಕೋ' ಅಂತ ಇಂಗ್ಲಿಷ್‌ನಲ್ಲಿ ಜೋರಾಗಿ ಹೇಳಿದಾಗ, ನಮ್ಮ ಅಣ್ಣ ನಾಚಿಕೆಯಿಂದ ಕುಗ್ಗಿಹೋದನಂತೆ. ನಮ್ಮ ಅಣ್ಣನ ವರ್ತನೆಯಿಂದ ಆ ಹುಡುಗಿಗೂ ಇರಿಸುಮುರಿಸು ಆಗಿತ್ತೇನೋ, ತನ್ನ ಸ್ಥಳವನ್ನೇ ಬದಲಿಸಿದಳಂತೆ. ಮುಂದೆ ಓದು ಮುಗಿಸಿ, ನಮ್ಮ ಅಣ್ಣ ಮದುವೆ ಆಗಿದ್ದು ಅದೇ ಹುಡುಗಿಯನ್ನು! ಈಗಲೂ ಜ್ಞಾಪಿಸಿಕೊಂಡು, ಹೆಂಡತಿಯನ್ನು ಆಗಾಗ ರೇಗಿಸುತ್ತಿರುತ್ತಾನೆ!



**ಬಿ. ವತ್ಸಲಾ, ಬೆಂಗಳೂರು**